"ಸರ್, ಇದು ನಿಜ ಸರ್. ಇಲ್ಲಿ ಎಲ್ಲರೂ ಹೇಳುತ್ತಾರೆ. ಸುಮಾರು ವರ್ಷಗಳಿಂದ ಜನ ಇದನ್ನೇ ಹೇಳುತ್ತಿದ್ದಾರೆ."

"ಅದೇನು ಅಂತ ನಾನೇ ನೋಡ್ತೀನಿ. ಈ ಬಾರಿಯ ಅಮಾವಾಸ್ಯೆಯ ದಿನ ನಾನೇ ನೋಡ್ತೀನಿ!"

ಶ್ರಾವಣದ ಅಮಾವಾಸ್ಯೆಯ ದಿನ... ರಾತ್ರಿ ಸುಮಾರು ಒಂದು ಗಂಟೆಯ ಸಮಯ. ಮೋಡಗಳು ಚದುರಿ ಅಲ್ಲಲ್ಲಿ ನಕ್ಷತ್ರಗಳು ತಮ್ಮ ಇರುವನ್ನು ಪ್ರಕಟಿಸುತ್ತಾ ಮಂದ ಬೆಳಕು ಹರಡಿದ್ದವು. ಅಂದಿನ ರಾತ್ರಿ ಆ ಮೆಟಡೋರ್‌ನ ರಹಸ್ಯ ಭೇದಿಸುವುದರಲ್ಲಿ ಇದ್ದ. ಅದೇ ವಿಷಯ ತನ್ನ ಮೇಲಾಧಿಕಾರಿಗೂ ಹೇಳಿ ಬಂದಿದ್ದ.

'ಒಂದು ಮೆಟಡೋರ್ ಬರುವುದಂದರೇನು, ಅದರಲ್ಲಿದ್ದವರು ಒಂಟಿಯಾಗಿ ಇದ್ದವರನ್ನು ಕೊಲ್ಲುವುದಂದರೇನು? ಹಾಗಾದರೆ ಅವರ ಶವ ಎಲ್ಲಿ ಹೋಗುತ್ತದೆ? ಊರ ಜನ ಆ ಮೆಟಡೋರ್ ಬಗ್ಗೆ ಕೇಳಿದ್ದಾರೆಯೇ ಹೊರತು ಯಾರೂ ನೋಡಿಲ್ಲ. ಕೇಳಿರುವುದು ಕೂಡಾ ಕೆಲವು ಹುಚ್ಚರಿಂದ. ಯಾರೋ ಏನೋ ಸುಳ್ಳು ಸುದ್ದಿ ಹಬ್ಬಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರಬೇಕು. ಇವತ್ತಿಗೆ ಎಲ್ಲದಕ್ಕೂ ಇತಿಶ್ರೀ ಹಾಡುತ್ತೇನೆ...' ಎಷ್ಟು ಹೊತ್ತಾದರೂ ಯಾವ ವಾಹನವೂ ಬರಲಿಲ್ಲ. ಬೇಸರದಿಂದ ಸಿಗರೇಟ್ ಹಚ್ಚಿದ ಗಣಪತಿ.

"ಒಂದು ಸಿಗರೇಟ್ ಇದೆಯಾ ಪ್ಲೀಸ್..." ಶಬ್ದ ಬಂದ ಕಡೆ ತಿರುಗಿದ. ಅಲ್ಲೊಬ್ಬ ವ್ಯಕ್ತಿ! ಒಂದು ಕ್ಷಣ ಭಯವಾಯಿತು. 'ಅವನಲ್ಲಿದ್ದ? ಎಲ್ಲಿಂದ ಬಂದ?' ಯಾವ ಮಾತನ್ನೂ ಆಡದೇ ಸಿಗರೇಟ್ ಕೊಟ್ಟ.

"ಏನು ಸಾರ್ ಇಲ್ಲಿ?" ಕೇಳಿದ ಆ ವ್ಯಕ್ತಿ. ಬಾಯಲ್ಲಿ ಸಿಗರೇಟ್ ಹಾಗೆಯೇ ಇತ್ತು. ಇನ್ನೂ ಹತ್ತಿಸಿರಲಿಲ್ಲ. "ಅದೇನೋ ಒಂದು ವಾಹನ ಬಂದು ಎಲ್ಲರನ್ನೂ ಸಾಯಿಸುತ್ತದೆ ಅಂತ ಸುದ್ದಿ ಕೇಳಿದೆ. ಅದನ್ನೇ ನೋಡೋಣ ಅಂತ ಬಂದೆ. ನಾನು ಇನ್‌ಸ್ಪೆಕ್ಟರ್ ಗಣಪತಿ. ನೀವು?" ಆ ಕ್ಷಣದಲ್ಲಿ ಢೋಲಕ್‌ನ ಶಬ್ದ ಕೇಳಿಸಿತು. ಶಬ್ದ ಬಂದ ಕಡೆ ತಿರುಗಿದ. ದೀಪಗಳನ್ನೂ ಹತ್ತಿಸಿಕೊಂಡು ಬರುತ್ತಿರುವ ಮೆಟಡೋರ್ ಕಾಣಿಸಿತು.

"ಇದೇನಾ ಆ ದೆವ್ವದ ವಾಹನ?" ಎನ್ನುತ್ತಾ ಆ ವ್ಯಕ್ತಿಯ ಕಡೆ ತಿರುಗಿದ. ಅವನಲ್ಲಿ ಇರಲಿಲ್ಲ. ಯಾರೋ ದೂರದಲ್ಲಿ ಓಡುತ್ತಿರುವ ಹಾಗೆ ಕಾಣಿಸಿತು. 'ದೆವ್ವ ಎಂದು ಹೆದರಿ ಓಡಿರಬೇಕು' ಎಂದುಕೊಂಡ. ಆ ಮೆಟಡೋರ್ ಗಣಪತಿಯ ಮುಂದೆ ಬಂದು ನಿಂತುಕೊಂಡಿತು. ಆ ಮುದುಕ ಬಾಗಿಲು ತೆರೆದು, "ಎಲ್ಲಿಗೆ ಹೋಗಬೇಕು? ಬನ್ನಿ ಒಳಗೆ, ಬಿಡುತ್ತೇವೆ..." ಎಂದ. ಅವನ ಬೆನ್ನ ಹಿಂದೆ ವಧುವಿನ ಅಲಂಕಾರ ಮಾಡಿಕೊಂಡ ಹುಡುಗಿ ತನ್ನನ್ನೇ ನೋಡುತ್ತಿದ್ದಾಳೆ ಅನಿಸಿತು ಗಣಪತಿಗೆ.

ಮನಸ್ಸಿನ ಮೇಲೆ ನಿಯಂತ್ರಣ ಇಲ್ಲದಂತೆ ಮೊದಲ ಮೆಟ್ಟಿಲ ಮೇಲೆ ಕಾಲಿಟ್ಟ... ಅದೇ ಸಮಯದಲ್ಲಿ ಅವನ ದೃಷ್ಟಿ ಒಳಗೆ ಕುಳಿತಿದ್ದವರ ಮೇಲೆ ಹರಿಯಿತು. ಅಲ್ಲಿ ಕುಳಿತಿದ್ದ ರವಿ!

"ಈ ದರೋಡೆಕೋರರ ಗುಂಪಿನಲ್ಲಿ ನೀನೂ ಇದ್ದೀಯಾ?" ಎನ್ನುತ್ತಾ ಇನ್ನೊಂದು ಹೆಜ್ಜೆ ಇಟ್ಟ. ಬಾಯಲ್ಲಿದ್ದ ಸಿಗರೇಟ್ ಹಾಗೆಯೇ ಇತ್ತು. ಇನ್ನೂ ಹತ್ತಿಸಿರಲಿಲ್ಲ. ಒಮ್ಮೆಲೇ ಅಲ್ಲಿದ್ದವರ ತಲೆ ಬುರುಡೆಗಳು ಬೆಂಕಿಯುಂಡೆಗಳಂತೆ ಹತ್ತಿ ಉರಿಯತೊಡಗಿದವು. ಎಲ್ಲರ ಬಾಯಲ್ಲಿಯೂ "ಸಿಗರೇಟ್ ಪ್ಲೀಸ್..." ಅನ್ನುವ ಶಬ್ದ ಮೇಲಿಂದ ಮೇಲೆ ಕೇಳಿ ಬರತೊಡಗಿತು.

'ಅಂದರೆ ಊರಿನವರ ಮಾತುಗಳು ನಿಜ! ಕಾನ್‌ಸ್ಟೆಬಲ್ ಹೇಳಿದ ಮಾತುಗಳು ನಿಜ! ರವಿಯ ತಲೆಯೂ ಭಯಂಕರವಾಗಿ ಹತ್ತಿ ಉರಿಯತೊಡಗಿದೆ. ರವಿಯೂ ಇವರಿಂದಲೇ ಸತ್ತಿದ್ದಾನೆ. ಯಾರ ಮೈಯಲ್ಲಿಯೂ ಬಟ್ಟೆ ಇಲ್ಲ. ಚರ್ಮ, ಮಾಂಸಗಳು ಸುಟ್ಟ ವಾಸನೆ ಸಹಿಸಲಸಾಧ್ಯವಾಗುತ್ತಿದೆ. ಅದಲ್ಲದೆ ಆ ಬೆಂಕಿಯ ಶಾಖ... ಅದೇ ಸಮಯಕ್ಕೆ ಆ ಹುಡುಗಿ ಎದ್ದು ಅವನನ್ನು ಅಪ್ಪಿಕೊಳ್ಳಲು